# ಕರ್ನಾಟಕ ವಿಧಾನಸಭೆ
# KARNATAKA LEGISLATIVE ASSEMBLY

*Monday, the 7th July, 1980/Ashada 16, 1902. S.E.*

The House met in the Assembly Chamber, Vidhana Soudha, at Twelve of the Clock.

[MR. SPEAKER (SRI P. VENKATARAMANA) in the Chair.]

## STARRED QUESTIONS
## (to which oral answers were given)

### Appointment of Marathi Kannada and Urdu Teachers for Primary Schools.

94. SRI B. B. SAYANAK (Belgaum).—Will the Minister for Education be pleased to state.–

(a) whether it is a fact that Marathi, Kannada and Urdu Teachers for Primary Schools are not appointed upto December 1979;

(b) if so, the reasons for delay;

(c) whether it is a fact that teachers are to be appointed at the beginning of the year or by the end of the year ?

SRI S. BANGARAPPA (Minister for Revenue and Agriculture) [on behalf of SRI G. B. SHANKAR RAO (Minister for Education)]

(a) The teachers have been appointed in all districts except in Bellary, Belgaum, Bijapur, Dakshina Kannada and Uttara Kannada Districts.

(b) The stay orders were issued by Government on account of election to the Parliament, the teachers have not been appointed in the above Districts.

(c) The teachers posts are filled up every year regularly at the beginning of the year *i.e.*, before the School starts working after summer vacation.

ಶ್ರೀ ಡಿ. ವಿ. ವೈಗಾಂಪ್‌ಕರ್ . —ಮಾನ್ಯ ಅಧ್ಯಕ್ಷರೆ, ಈಪ್ರಶ್ನೆಯನ್ನು ಮಾನ್ಯ ಸದಸ್ಯರಾದ ಶ್ರೀ ಬಿ. ಬಿ. ಸಯನಕ್‌ರವರ ಅಪೇಕ್ಷೆಯ ಮೇರೆಗೆ ಕೇಳುತ್ತಿದ್ದೇನೆ. ಡಿ.ಎಲ್.ಆರ್.ಸಿ. ಕಮಿಟಿಯವರು ಕಳೆದ

ನವೆಂಬರ್‌ನಲ್ಲಿ ಉಪಾಧ್ಯಾಯರ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಇಂಟರ್‌ವ್ಯೂಗೆ ಕರೆದು ಇದ್ದಕ್ಕಿದ್ದಂತೆ ಆದನ್ನು ರದ್ದುಮಾಡಿ ಮತ್ತೆ ಅವರನ್ನು ಇದುವರೆಗೂ ಕರೆಯದಿರಲು ಕಾರಣ ಏನು ? ಮತ್ತು ಈ ವರ್ಷದ ಆರಂಭದಲ್ಲಿ ಶಿಕ್ಷಕರನ್ನು ನೇಮಿಸಲಾಗಿದೆಯೇ ?

† ಶ್ರೀ ಎಸ್. ಬಂಗಾರಪ್ಪ.—ಆ ರೀತಿ ಕಾರವಾರ ಜಿಲ್ಲೆಯಲ್ಲಿ ಆಗಿರಬಹುದು, ಅಥವಾ ಧಾರವಾಡ ಜಿಲ್ಲೆಯಲ್ಲಿ ಆಗಿರಬಹುದು, ಒಂದು ಸಂಗತಿ ಏನಾಯಿತು ಎಂದರೆ ಉಪಾಧ್ಯಾಯರುಗಳ ಹುದ್ದೆಗಳಿಗೆ ಇಂಟರ್‌ವ್ಯೂ ನಡೆಯುತ್ತಿದ್ದಾಗ ಲೋಕಸಭಾ ಚುನಾವಣೆ ಬಂತು. ಆಗ ಮರಾಠಿ, ಕನ್ನಡ ಹಾಗೂ ಉರ್ದು ಪ್ರಾಥಮಿಕ ಶಾಲೆಗಳ ಉಪಾಧ್ಯಾಯರ ನೇಮಕಾತಿ ಸ್ಥಗಿತಗೊಂಡಿತು. ಈಗ ಈ ಡಿ.ಎಲ್.ಆರ್. ಸಿ. ಕಮಿಟಿಗೆ ನಾನ್ ಆಫಿಷಿಯಲ್ಸನ್ನು ಯಾರ್ಯಾರನ್ನು ಹಾಕಬೇಕೆಂದು ಕೇಳಿದ್ದೇವೆ. ಈಗಾಗಲೇ ಕೆಲವು ಜಿಲ್ಲೆಗಳಿಂದ ಲಿಸ್ಟ್ ಬಂದಿದೆ. ಇನ್ನೂ ಕೆಲವು ಜಿಲ್ಲೆಗಳಿಂದ ಬರುವುದಿದೆ. ಆಂತೂ ಆದಷ್ಟು ಬೇಗ ಡಿ.ಎಲ್.ಆರ್.ಸಿ. ಸಮಿತಿಯನ್ನು ಸಂಪೂರ್ಣವಾಗಿ ಅಸ್ತಿತ್ವಕ್ಕೆ ತರುತ್ತೇವೆ.

ಶ್ರೀ ಡಿ. ವಿ. ವೈಗಾಂಕರ್.—ತಾವು ಈ ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರದಲ್ಲಿ

'The stay orders were issued by Government on account of election to the Parliament, the teachers have not been appointed in the above Districts'

ಎಂದು ಹೇಳಿದ್ದೀರಿ. ಆದರೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಡಿ.ಎಲ್.ಆರ್.ಸಿ. ಕಮಿಟಿ ಫಾರಂ ಆಗಿತ್ತು, ಅವರು ಅಭ್ಯರ್ಥಿಗಳನ್ನೂ ಆಯ್ಕೆ ಮಾಡಿದ್ದರು, ಆದರೆ ಆ ಸಮಿತಿ ಹೋದಕೂಡಲೇ ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿಯೂ ಅಷ್ಟಕ್ಕೆ ನಿಂತು ಹೋಯಿತು. ಸ್ವಾಮಿ, ಒಂದು ಉದಾಹರಣೆ ಹೇಳುವುದಾದರೆ ನನ್ನ ಸೂಪಾ ತಾಲೂಕ್‌ನಲ್ಲಿ ಶಿಕ್ಷಕರಿಲ್ಲದೆ ಸುಮಾರು ೨೦ ಶಾಲೆಗಳು ಮುಚ್ಚಿವೆ. ಇದರಿಂದಾಗಿ ಮಕ್ಕಳಿಗೆ ಉಂಟಾಗಿರತಕ್ಕ ತೊಂದರೆಯನ್ನು ಪರಿಹರಿಸಲು ತಾತ್ಕಾಲಿಕವಾಗಿ ಶಿಕ್ಷಕರನ್ನು ನೇಮಕ ಮಾಡಲು ಸರ್ಕಾರದವರು ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಸ್. ಬಂಗಾರಪ್ಪ.—ಉಪಾಧ್ಯಾಯರುಗಳ ನೇಮಕಾತಿಗಾಗಿ ಇಂಟರ್‌ವ್ಯೂಗಳು ನಡೆಯುತ್ತಿದ್ದಾಗ ಚುನಾವಣೆಗಳು ಬಂದಿದ್ದರಿಂದ ಅದು ಅಷ್ಟಕ್ಕೆ ನಿಂತಿದೆ. ಆದರೆ ಎಲ್ಲಿ ಇಂಟರ್‌ವ್ಯೂ ನಡೆದು ಅಭ್ಯರ್ಥಿಗಳ ಆಯ್ಕೆ ಪಟ್ಟಿ ಅಂತಿಮವಾಗಿ ಸಿದ್ಧವಾಗಿದೆ ಅಲ್ಲಿ ಅದನ್ನು ಜಾರಿಗೆ ಕೊಟ್ಟಿದ್ದೇವೆ. ಅಲ್ಲದೆ ಉದ್ಯೋಗ ವಿನಿಮಯ ಕಛೇರಿಯಿಂದ ಅಭ್ಯರ್ಥಿಗಳ ಪಟ್ಟಿಯನ್ನು ತರಿಸಿಕೊಂಡು ತಾತ್ಕಾಲಿಕವಾಗಿ ಉಪಾಧ್ಯಾಯರನ್ನು ನೇಮಕ ಮಾಡಿಕೊಳ್ಳಬಹುದೆಂದು ಕಳೆದ ಎರಡು ವರ್ಷಗಳ ಹಿಂದೆಯೇ ಕಾನೂನು ಮಾಡಿದ್ದೇವೆ.

ಶ್ರೀ ಮಲ್ಲನಗೌಡ ಪಾಟೀಲ್.—ಮಾನ್ಯ ಅಧ್ಯಕ್ಷರೇ, ಹುಕ್ಕೇರಿ ತಾಲ್ಲೂಕಿನಲ್ಲಿ ಕೆಲವೊಂದು ಹಳ್ಳಿಗಳಲ್ಲಿ ಪ್ರೈಮರಿ ಶಾಲೆಗಳಲ್ಲಿ ೫ ಕ್ಲಾಸ್‌ಗೆ ಒಬ್ಬ ಉಪಾಧ್ಯಾಯರು ಇರುತ್ತಾರೆಂದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದರೀತಿ ಅವರ ಜಿಲ್ಲೆಯಲ್ಲೇ ಅಲ್ಲ. ನಮ್ಮ ಶಿವಮೊಗ್ಗಾ ಜಿಲ್ಲೆಯಲ್ಲಿಯೂ ಕೂಡ ಇದೇ ರೀತಿಯಾಗಿದೆ. ಇದನ್ನೆಲ್ಲಾ ಸರಿ ಪಡಿಸಲಿಕ್ಕೆ ಎಂದು ಡಿ.ಎಲ್.ಆರ್.ಸಿ. ಕಮಿಟಿಯ ಮುಖಾಂತರ ರಿಕ್ವೆಲರ್ಡ್ ನಂಬರ್ ಎಷ್ಟು ಬೇಕೋ ಅಷ್ಟನ್ನು ಆದಷ್ಟು ಬೇಗ ಅಪಾಯಿಂಟ್ ಮಾಡುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳಲು ಪ್ರಯತ್ನ ನಡೆಯುತ್ತಿದೆ.

ಶ್ರೀ ವೀರಭದ್ರಪ್ಪ.—ಮಾನ್ಯ ಅಧ್ಯಕ್ಷರೆ, ನಮ್ಮ ಬಳ್ಳಾರಿ ಜಿಲ್ಲೆಯಲ್ಲಿ ಡಿ.ಎಲ್ಆರ್.ಸಿ. ಕಮಿಟಿಯವರು ಮಾಡಿದ ನೇಮಕಾತಿ ಏನು ಇದೆ ಅದನ್ನು ಕಾರ್ಯಗತ ಮಾಡದೆ ಇರುವುದರಿಂದ ಉಪಾಧ್ಯಾಯರು ಇಲ್ಲದೆ ತೊಂದರೆಯಾಗಿದೆ ಆದ್ದರಿಂದ ಸರ್ಕಾರ ಇದರ ಬಗ್ಗೆ ಏನು ಕ್ರಮ ತೆಗೆದು ಕೊಳ್ಳುತ್ತದೆ ?

ಶ್ರೀ ಎಸ್. ಬಂಗಾರಪ್ಪ.—ಇದರಲ್ಲಿ ಯಾವುದೇ ಜಿಲ್ಲೆಯನ್ನು ಪ್ರತ್ಯೇಕ ಪ್ರತ್ಯೇಕವಾಗಿ ಪರಿಶೀಲಿಸಂಥ ಪ್ರಶ್ನೆಯಿಲ್ಲ, ಎಲ್ಲಾ ಜಿಲ್ಲೆಗಳಿಗೂ ಈ ಡಿ.ಎಲ್.ಆರ್.ಸಿ ಕಮಿಟಿಯನ್ನು ಮಾಡಿತ್ತು. ಅದು

† Indicates that remarks or speeches have not been revised by the member concerned.

ಎಲ್ಲಾ ಜಿಲ್ಲೆಗೂ ಅನ್ವಯಿಸುತ್ತೆ. ಆದ್ದರಿಂದ ಎಲ್ಲಾ ಜಿಲ್ಲೆಗಳಿಗೂ ಅನುಕೂಲವಾಗುವಂತೆ ಕಮಿಟಿಗಳನ್ನು ಕಾನ್‌ಸ್ಟ್ಯೂಟ್ ಮಾಡುತ್ತೇವೆ.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—ಈ ಡಿ.ಎಲ್.ಆರ್.ಸಿ ಕಮಿಟಿ ಏನು ನೇಮಕವಾಗಿತ್ತು, ಅದು ಪಾರ್ಲಿಮೆಂಟ್ ಎಲೆಕ್ಷನ್ ಆಗುವಾಗ ನಮ್ಮ ಹಾಸನ ಜಿಲ್ಲೆಯಲ್ಲಿ ಅದು ಕಾರ್ಯವನ್ನು ನಿಲ್ಲಿಸಿತ್ತು. ಮತ್ತೆ ಪುನಃ ಉಪಾಧ್ಯಾಯರನ್ನು ನೇಮಕ ಮಾಡಿಲ್ಲ. ನನ್ನ ಜಿಲ್ಲೆಯಲ್ಲಿ ಸುಮಾರು ೬೦ ಸ್ಕೂಲುಗಳಿಗೆ ಉಪಾಧ್ಯಾಯರು ಇಲ್ಲದೆ ಬಹಳ ತೊಂದರೆಯಾಗಿದೆ ಆದ್ದರಿಂದ ಕೂಡಲೇ ಇದರ ಬಗ್ಗೆ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆಯೇ ?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರ ಹೇಳಬೇಕಾದರೆ ಹಿಂದಿನ ಕಮಿಟಿ ವಿವರ ಈಗ ನನ್ನ ಹತ್ತಿರ ಇಲ್ಲ. ಈಗ ಹೊಸ ಕಮಿಟಿ ಮಾಡಿದ ಕೂಡಲೇ ಹಿಂದೆ ಮಾಡಿದ ಪಟ್ಟಿಯನ್ನು ಗಮನಕ್ಕೆ ತೆಗೆದುಕೊಂಡು ತೀರ್ಮಾನ ಮಾಡುತ್ತೇನೆ.

## Mosquito menace in Gulbarga City.

225 SRI PRABHAKAR TELKAR (Chitapur).—Will the Minister for Housing & Urban Development be pleased to State:—

(a) Whether it is not a fact that the life of people of Gulbarga City has become miserable due to mosquito menace;

(b) if so, what preventive measures the Government has taken to eradicate this menace?

SRI DHARM SINGH (Minister for Housing and Urban Development).—

(a) There have been complaints regarding mosquito nuisance in Gulbarga City.

(b) Spraying and anti-larvi-cidal measures have been taken up. As a long term preventive measure a comprehensive underground drainage scheme has been taken up.

SRI PRABHAKAR TELKAR.—Even after the spraying of DDT the nuisance of mosquito is still there. What measures the Government will take to eradicat this mosquito menace or nuisance in Gulbarga City?

ಶ್ರೀ ಧರ್ಮಸಿಂಗ್,—ಮಾನ್ಯ ಅಧ್ಯಕ್ಷರೆ, ಸದಸ್ಯರು ಹೇಳಿದ್ದು ನಿಜ ಎಂದು ಉತ್ತರ ಕೊಟ್ಟಿದ್ದೇನೆ. ಆದರೂ ಕೂಡ ಡಿಡಿಟಿ ಸ್ಪ್ರೇಗೆ ಸೊಳ್ಳೆಗಳು ಹೋಗುವುದಿಲ್ಲ. ಆದ್ದರಿಂದ ಇದು ನ್ಯಾಷನಲ್ ಕಂಟ್ರೋಲ್ ಪ್ರೋಗ್ರಾಂ ಬಗ್ಗೆ ಒಂದು ವಿಂಟಿಂಗ್‌ನ್ನು ೧೨-೨-೧೯೮೦ರಲ್ಲಿ ಮಾಡಿದ್ದೆ. ನಮ್ಮ ಗುಲ್ಬರ್ಗಾದಲ್ಲಿ ಕೆಲವು ಕಂದಕಗಳು ಹಾಗೂ ಒಂದು ಎಸ್. ಬಿ.ಟ್ಯಾಂಕ್ ಇದೆ. ಅದು ಸೊಳ್ಳೆಗಳ ಬ್ರೀಡಿಂಗ್ ಸೆಂಟರ್‌ಆಗಿದೆ, ಆದ್ದರಿಂದ ಸೊಳ್ಳೆಗಳು ಹುಟ್ಟುತಕ್ಕಂಥ ಮತ್ತು ಮನೆಮಾಡತಕ್ಕಂಥ ಕೇಂದ್ರಗಳನ್ನು ಯಾವ ರೀತಿ ಹೋಗ ಲಾಡಿಸಿ ಸೊಳ್ಳೆಗಳ ಕಾಟವನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡಬೇಕು ಎನ್ನುವ ಬಗ್ಗೆ ಯೋಚನೆಮಾಡಿ ಇದಕ್ಕೆ ಒಂದು ೫೦ ಸಾವಿರ ರೂಪಾಯಿ ಒಂದು ಸ್ಕೀಮನ್ನು ಕೂಡ ಮಾಡಿದ್ದೇವೆ. ಈ ಸೊಳ್ಳೆಗಳನ್ನು ಹೋಗಲಾಡಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಇದಕ್ಕೆ ಒಂದು ಎಕ್ಸ್‌ಪರ್ಟ್ ಕಮಿಟಿ ಮಾಡಿ ಅದು ೧೨-೨-೧೯೮೦ರಲ್ಲಿ ಒಂದು ವಿಂಟಿಂಗ್ ಕೂಡ ಮಾಡಿದೆ. ಜೊತೆಗೆ ಇದರ ಬಗ್ಗೆ ಮುನಿಸಿಪಾಲಿಟಿ ಯವರು ಹಾಗೂ ಹೆಲ್ತ್ ಡಿಪಾರ್ಟ್‌ಮೆಂಟಿನವರು ಕೂಡಿ ಕಾರ್ಯಕ್ರಮ ತೆಗೆದುಕೊಳ್ಳುತ್ತಿದೆ,.